(97)

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಎಂವೈಎಸ್\2698\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:03/06/2020

## ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ\ ಸಾರ್ವಜನಿಕ ನೌಕರರಾದ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಕಿರಿಯ ಅಭಿಯಂತರರಾದ **ಶ್ರೀ.ವಿ.ಟಿ.ಪ್ರಕಾಶ್** [ಪ್ರಸ್ತುತ ನಿವೃತ್ತ] ಮತ್ತು ಅತ್ತಹಳ್ಳಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿದ್ದ **ಶ್ರೀಮತಿ.ರಾಜಮ್ಮ** ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮದ ನಿವಾಸಿಯಾದ ಶ್ರೀ.ಶಿವನಂಜು ಬಿನ್ ಸಿದ್ದಯ್ಯ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಪಂಚಾಯತ್‌ನ 1) ಕಾರ್ಯನಿರ್ವಾಹಕ ಅಧಿಕಾರಿ ಮತ್ತು 2) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಇನ್ನು ಮುಂದೆ, '1 ಮತ್ತು 2ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** 2016-17ನೇ ಸಾಲಿನ 14ನೇ ಹಣಕಾಸು ಯೋಜನೆಯಡಿ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಶೇ.25ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮದ ಅನುದಾನದಲ್ಲಿ ಸದರಿ ಗ್ರಾಮದ ರಾವಳೇಶ್ವರ ದೇವಸ್ಥಾನದಿಂದ ತೊಂಬೆನಲ್ಲಿಯ ತನಕ ರಸ್ತೆ ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ ನಿರ್ವಹಿಸಿಲ್ಲ ಹಾಗೂ ಕಳಪೆ ಕಾಮಗಾರಿಯಾಗಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

4. ದೂರಿನಲ್ಲಿ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಈ ಸಂಸ್ಥೆಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ ರವರಿಗೆ ಕೇಳಲಾಗಿ, ಕಾರ್ಯಪಾಲಕ ಅಭಿಯಂತರರು–3 [ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ] ರವರು ತಮ್ಮ ತನಿಖಾ ವರದಿಯಲ್ಲಿ –

> ದೂರಿಗೆ ಸಂಬಂಧಿಸಿದ ಕಾಮಗಾರಿಯ ಅಂದಾಜು ಮೊತ್ತ ₹36,000/–ಗಳಾಗಿದ್ದು, ಅಂದಾಜು ಪಟ್ಟಿಯ ಪ್ರಕಾರ, 1) ರಸ್ತೆಗಾಗಿ ಮಣ್ಣಿನಲ್ಲಿ ಅಗೆತ; 2) ರಸ್ತೆಗಾಗಿ ಏರಿ ನಿರ್ಮಿಸುವುದು; 3) ರಸ್ತೆಗಾಗಿ ಮೆಟಲಿಂಗ್ ಮಾಡುವುದಾಗಿದ್ದು; ಅಳತೆ ಪುಸ್ತಕದಲ್ಲಿ ದಾಖಲಿಸಲಾದ ಅಳತೆ ಮತ್ತು ಸ್ಥಳ ಪರಿಶೀಲನೆ ವೇಳೆ ರಸ್ತೆಯ ಅಳತೆಗಳು ಹೊಂದಾಣಿಕೆ ಆಗಿರುವುದು ಕಂಡು ಬಂದಿದೆ. ಉಳಿದ ಅಳತೆಗಳು ಪೂರ್ವ ದಾಖಲಿತ ಅಳತೆಗಳಾಗಿವೆ. ರಸ್ತೆ ನಿರ್ಮಾಣ ಮಾಡುವ ಮೊದಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅಕ್ಕಪಕ್ಕದ ನಿವಾಸಿಗಳಿಂದ ಒಪ್ಪಿಗೆ ಪಡೆಯದೇ, ರಸ್ತೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಖಾಸಗಿ ಜಾಗದಲ್ಲಿ ನಿರ್ಮಿಸಲಾಗಿದೆಯೆಂದು ಸ್ಥಳೀಯರು ತಿಳಿಸಿದ್ದಾರೆ. ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ ಅನುಷ್ಠಾನಗೊಳಿಸಿದೆಯೆಂದು ಹೇಳಿದ್ದಾರೆ.

5. ಟಿ.ನರಸೀಪುರ ಉಪವಿಭಾಗದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಕಿರಿಯ ಅಭಿಯಂತರರಾದ ಶ್ರೀ.ವಿ.ಟಿ.ಪ್ರಕಾಶ್ ಹಾಗೂ ಅತ್ತಹಳ್ಳಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಶ್ರೀಮತಿ.ರಾಜಮ್ಮ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಶ್ರೀ.ಬೋರೇಗೌಡ ರವರುಗಳನ್ನು ಕ್ರಮವಾಗಿ, 3 ರಿಂದ 5ನೇ ಎದುರುದಾರರನ್ನಾಗಿ ಪ್ರಕರಣದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆ ಮತ್ತು ತನಿಖಾ ವರದಿಗೆ ಉತ್ತರವನ್ನು ಕೇಳಲಾಯಿತು.

6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

> ದೂರಿನ ಕಾಮಗಾರಿಯನ್ನು ಪಂಚಾಯತ್‌ನಿಂದ ಬಂದ ಕೋರಿಕೆ ಮೇರೆಗೆ ಕೈಗೆತ್ತಿಕೊಂಡು ಅಂದಾಜು ಪಟ್ಟಿಯಲ್ಲಿನ ಐಟಂಗಳ ಪ್ರಕಾರ ನಿರ್ವಹಿಸಿರುವುದರಿಂದ ದೂರಿನ ಆರೋಪಗಳು ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

7. ನಾಲ್ಕು(4) ಮತ್ತು 5ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಸದರಿ ದೂರಿನ ಪ್ರಶ್ನಿತ ಕಾಮಗಾರಿ "**ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮದ ರವಳೇಶ್ವರ ದೇವಸ್ಥಾನದಿಂದ ತೊಂಬೆನಲ್ಲಿ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ**" ಆಗಿದೆ;

2) "**ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮದ ರವಳೇಶ್ವರ ದೇವಸ್ಥಾನದಿಂದ ತೊಂಬೆನಲ್ಲಿ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ**" [ಅಂದಾಜು **ಮೊತ್ತ ₹0.64 ಲಕ್ಷ**] ಮತ್ತು **ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮದಿಂದ ರವಳೇಶ್ವರ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ** [ಅಂದಾಜು **ಮೊತ್ತ ₹0.36 ಲಕ್ಷ**] ಗಳಿಗೆ ಸಂಬಂಧಿಸಿದ ಎರಡು ಅಂದಾಜು ಪಟ್ಟಿಗಳಿವೆ. ಸದರಿ ಎರಡು ಅಂದಾಜು ಪಟ್ಟಿಗಳನ್ನು 3ನೇ ಎದುರುದಾರರೇ ತಯಾರಿಸಿದ್ದಾರೆ;

3) ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಅತ್ತಹಳ್ಳಿ ಗ್ರಾಮ ಪಂಚಾಯತ್ ರವರು ದಿ:28/05/2020ರ ಪತ್ರದೊಂದಿಗೆ ದಾಖಲೆಗಳನ್ನು ಸಲ್ಲಿಸಿದ್ದು, ಸದರಿ ಪತ್ರದ ಒಕ್ಕಣಿಕೆಗಳು ಈ ಕೆಳಗಿನಂತಿವೆ –

*"ವಿಷಯ:– ರವಳೇಶ್ವರ ದೇವಸ್ಥಾನದಿಂದ ತೊಂಬೆನಲ್ಲಿ ವರೆಗೆ ನಡೆದ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಮಾಹಿತಿ ಸಲ್ಲಿಸುತ್ತಿರುವ ಬಗ್ಗೆ.*

*ಉಲ್ಲೇಖ:– ತಮ್ಮ ಕಛೇರಿ ದೂರವಾಣಿ ದಿನಾಂಕ:28/05/2020*

****

*ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ತಾವು ತಿಳಿಸಿದಂತೆ ಸದರಿ ಗ್ರಾಮ ಪಂಚಾಯತ್‌ನಲ್ಲಿ 14ನೇ ಹಣಕಾಸು ಯೋಜನೆ ಅಡಿ 2016–17ನೇ ಸಾಲಿನಲ್ಲಿ ರವಳೇಶ್ವರ ದೇವಸ್ಥಾನದಿಂದ ತೊಂಬೆನಲ್ಲಿ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ – ₹0.64 [ಅರವತ್ತನಾಲ್ಕು ಸಾವಿರ] ಕ್ರಿಯಾ ಯೋಜನೆ ಅನುಮೋದನೆಗೊಂಡಿರುವುದು ಸರಿಯಷ್ಟೆ. ಕಾಮಗಾರಿಗೆ ಇದೇ ಅಂದಾಜು ಮೊತ್ತಕ್ಕೆ ಎಸ್ಟಿಮೇಟ್ ತಯಾರಾಗಿರುವುದು ಕಛೇರಿಯಲ್ಲಿ ಲಭ್ಯವಿರುತ್ತದೆ. ಆದರೆ ಈ ಕಾಮಗಾರಿಯ ಹೆಸರಿನ ಮೊತ್ತಕ್ಕೆ ಬಿಲ್ ಬರೆದಿರುವುದಿಲ್ಲ. ಮುಂದುವರೆದು, ಅತ್ತಹಳ್ಳಿ ಗ್ರಾಮದಿಂದ ರವಳೇಶ್ವರ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ₹36,000/– ಮೊತ್ತಕ್ಕೆ ಅಂದಾಜು ಪಟ್ಟಿ ತಯಾರಿಸಿದ್ದು, ಬಿಲ್ ಪಾವತಿಯಾಗಿರುತ್ತದೆ.* ***ಆದರೆ ಅತ್ತಹಳ್ಳಿ ಗ್ರಾಮದಿಂದ ರವಳೇಶ್ವರ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕ್ರಿಯಾ ಯೋಜನೆ ಅನುಮೋದನೆಗೊಂಡಿರುವುದಿಲ್ಲ.***

*ಸದರಿ ಕಾಮಗಾರಿ ನಿರ್ವಹಿಸಿದ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಿಡಿಓ ರವರು ಪ್ರಸ್ತುತ ಮರಣ ಹೊಂದಿದ್ದು, ಅದೇ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಕಾರ್ಯದರ್ಶಿರವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಕೇಳಿದಾಗ ಅವರು ಎರಡೂ ಒಂದೇ ಕಾಮಗಾರಿ, ಎರಡೆರಡು ಕಾಮಗಾರಿ ನಿರ್ವಹಣೆ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಒಂದೇ ಬಿಲ್ ಪಾವತಿಯಾಗಿರುತ್ತದೆ. ಎರಡೆರಡು ಬಿಲ್ ಪಾವತಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.*

*ಈ ಪತ್ರದೊಂದಿಗೆ ದಾಖಲಾತಿಗಳನ್ನು ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸುತ್ತಿದ್ದೇವೆ.*

*ವಂದನೆಗಳೊಂದಿಗೆ*

*ತಮ್ಮ ನಂಬುಗೆಯ*

*ಸಹಿ/–*

*ಪಂಚಾಯತ್ ಅಭಿವೃದ್ಧಿ ಅಧಿಕಾರಿ,*

*ಅತ್ತಹಳ್ಳಿ ಗ್ರಾಮ ಪಂಚಾಯತ್"*

100



4) ಮೇಲಿನ ಖಂಡಿಕೆ–8(2)ರಲ್ಲಿ ಹೇಳಿದ ಎರಡು ಕಾಮಗಾರಿಗಳ ಪೈಕಿ 1ನೇ ಕಾಮಗಾರಿಯ ಕ್ರಿಯಾ ಯೋಜನೆ ಅನುಮೋದನೆಗೊಂಡಿದೆ. ಮೇಲಿನ ಉಪ ಖಂಡಿಕೆ–3ರ ಪತ್ರದನ್ವಯ, 2ನೇ ಕಾಮಗಾರಿಗೆ ಕ್ರಿಯಾ ಯೋಜನೆ ಅನುಮೋದನೆಗೊಂಡಿಲ್ಲ. ಆದಾಗ್ಯೂ, 3ನೇ ಎದುರುದಾರರು 2ನೇ ಕಾಮಗಾರಿಯ ಅಂದಾಜು ಪಟ್ಟಿಯನ್ನು ₹0.36 ಲಕ್ಷಗಳಿಗೆ ತಯಾರಿಸಿ, ಸದರಿ ಅಂದಾಜು ಪಟ್ಟಿಗೆ ಅವರೇ ತಾಂತ್ರಿಕ ಅನುಮೋದನೆಯನ್ನು ನೀಡಿ, ಕಾಮಗಾರಿಯನ್ನು ನಿರ್ವಹಿಸಿದೆ;

5) ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಗ್ರಾಪಸ 2015 ಬೆಂಗಳೂರು ದಿ:17/03/17 ರಲ್ಲಿ 14ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಮಾರ್ಗಸೂಚಿಯನ್ವಯ ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆಗೊಳಿಸಲಾದ ಸಾಮಾನ್ಯ ಮೂಲ ಅನುದಾನಕ್ಕನುಗುಣವಾಗಿ ಕ್ರಿಯಾ ಯೋಜನೆಗಳನ್ನು ತಯಾರಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿದೆ;

6) ಆದರೆ, **ಅತ್ತಹಳ್ಳಿ ಗ್ರಾಮದಿಂದ ರವಳೇಶ್ವರ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ** ಕಾಮಗಾರಿಗೆ ಕ್ರಿಯಾ ಯೋಜನೆ ಅನುಮೋದನೆಗೊಂಡಿಲ್ಲ. ಕ್ರಿಯಾ ಯೋಜನೆಯ ನಿಗಧಿತ ಅನುದಾನದ ಅಂದಾಜು ಪಟ್ಟಿಯನ್ನು ಪರಿಷ್ಕರಿಸಿದೇ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಟಿ.ನರಸೀಪುರ ರವರು 1ನೇ ಎದುರುದಾರರಿಗೆ ಬರೆದ ದಿ:20/07/17ರ ಪತ್ರದಲ್ಲಿ ಹೇಳಿದೆ;

7) ಅನುಮೋದನೆಗೊಂಡ ಕಾಮಗಾರಿಯಾದ **"ಅತ್ತಹಳ್ಳಿ ಗ್ರಾಮದ ರವಳೇಶ್ವರ ದೇವಸ್ಥಾನದಿಂದ ತೊಂಬೆನಲ್ಲಿ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ"** ಯನ್ನು ನಿರ್ವಹಿಸದೇ ಇದ್ದರೂ, ಆ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ.ಎನ್.ಜಯರಾಂ ಬಿನ್ ಲೇಟ್.ನಂಜುಂಡೇಗೌಡ ರವರಿಗೆ ವಹಿಸಿದೆ ಎಂಬಂತಿರುವ ಕರಾರು ಪತ್ರವಿದೆ. ಆದರೆ, ಗುತ್ತಿಗೆದಾರರ ಬಿಲ್ಲಿನಲ್ಲಿ "ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮದಿಂದ ರವಳೇಶ್ವರ ದೇವಸ್ಥಾನದವರೆಗೆ ರಸ್ತೆ ಅಭಿವೃದ್ಧಿ" ಕಾಮಗಾರಿಯ ಬಗ್ಗೆ ಉಲ್ಲೇಖಿಸಿದೆ;

8) ಸದರಿ ಕಾಮಗಾರಿಯ ಅಳತೆಯನ್ನು 3ನೇ ಎದುರುದಾರರು ಅಳತೆ ವಹಿಯ ಪುಟ ಸಂಖ್ಯೆ:39 ಮತ್ತು 40ರಲ್ಲಿ ದಾಖಲಿಸಿದ್ದಾರೆಂದು ಬಿಲ್ಲಿನಲ್ಲಿ ನಮೂದಿಸಿದೆ. ಅಳತೆಯನ್ನು ದಾಖಲಿಸಿದ ದಿನಾಂಕ ಮತ್ತು ಅಳತೆ ವಹಿಯ ಸಂಖ್ಯೆಯನ್ನು ಬಿಲ್ಲಿನಲ್ಲಿ ನಮೂದಿಸಿಲ್ಲ. ಕಾಮಗಾರಿಯ ಅಳತೆಯನ್ನು ಪುಟ ಸಂ:41 ಮತ್ತು 42ರಲ್ಲಿ ದಾಖಲಿಸಿರುವುದು ಕಡತದಲ್ಲಿ ಲಭ್ಯವಿರುವ ಅಳತೆ ವಹಿಯಲ್ಲಿ ಕಂಡು ಬಂದಿದೆ. ಇದನ್ನು ಗಮನಿಸಿದಾಗ ಬಿಲ್ಲಿನಲ್ಲಿ ನಮೂದಿಸಿರುವ ವಿವರಕ್ಕೂ ಅಳತೆ ವಹಿಯಲ್ಲಿರುವ ವಿವರಗಳಿಗೂ ಹೋಲಿಕೆಯಿಲ್ಲ;

9) ಅಳತೆಯನ್ನು ದಾಖಲಿಸಿದ ದಿನಾಂಕವನ್ನು 3ನೇ ಎದುರುದಾರರು ಅಳತೆ ವಹಿಯಲ್ಲಿ ನಮೂದಿಸಿಲ್ಲ;

10) ಈ ಎಲ್ಲಾ ಲೋಪದೋಷಗಳಿದ್ದರೂ 4 ಮತ್ತು 5ನೇ ಎದುರುದಾರರು ಗುತ್ತಿಗೆದಾರರಿಗೆ ₹32,995/– ಗಳನ್ನು [₹2,256/– ಶಾಸನಾತ್ಮಕ ಕಡಿತ ಹೊರತುಪಡಿಸಿ] ನೀಡಿದೆ;

mys/269/17

101



11) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 86 ಈ ಕೆಳಗಿನಂತಿದೆ –

**86. Check Measurement of Works**

Accountability and transparency are two key factors. In order to ensure that the money spent for a development work is fully spent and an asset is created in proportion to the amount spent, the measurement recorded and paid for it is done on the basis of asset created, the following persons of Gram Panchayath may check measure the measurement recorded by the Engineer of the Gram Panchayath.

| Outlay of work (outlay limit) | | Persons responsible for check measurement of works |
|---|---|---|
| 1 | If the total estimated cost of single work is below ₹25,000/- | Gram Panchayath Engineer and Adhyaksha shall jointly check measure the work and record their findings in the measurement book. |
| 2 | If the total estimated cost of single work is above ₹25,000/- but below ₹4 lakhs | Adhyaksha of Gram Panchayath and Assistant Executive Engineer of Zilla Panchayath Engineering sub-division shall jointly and record their findings in the measurement book. |
| 3 | The total estimated cost of single work is above ₹4 lakhs | Adhyaksha of Gram Panchayath along with the Executive Engineer of Zilla Panchayath Engineering division shall jointly check measure and record their findings in the measurement book. |

Note: 1) If the actual cost of single work is above ₹4 lakhs, the authority concerned with check measurement shall ensure 100% check measurement of the work. In other cases, they can restrict check measurement to 25% of measurement of each single work.

2) Gram Panchayath Engineer shall also arrange to take photos at various stages before and after the execution of work. Gram

Panchayath shall make provision for a lumsum allotment not exceeding ₹500/- in estimate prepared for work involving creation of assets to meet expenses on photos and its documentation.

12) ಈ ದೂರಿಗೆ ಸಂಬಂಧಿಸಿದ ಕಾಮಗಾರಿಯ ಅಂದಾಜು ಮೊತ್ತ ₹25,000/- ಮೀರಿದೆ ಮತ್ತು ₹4 ಲಕ್ಷ ಒಳಗಿದೆ. ಮೇಲೆ ಹೇಳಿದ ನಿಯಮದನ್ವಯ ಪಂಚಾಯತ್ ಅಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಂಟಿಯಾಗಿ ಚೆಕ್ ಮೆಷರ್‌ಮೆಂಟ್ ಮಾಡಬೇಕು. ಆದರೆ, ಆ ಅವಧಿಯಲ್ಲಿ ಪಂಚಾಯತ್ ಅಧ್ಯಕ್ಷರು ಮತ್ತು ಅಭಿವೃದ್ಧಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ 4 ಮತ್ತು 5ನೇ ಎದುರುದಾರರುಗಳು ಕಾಮಗಾರಿಯ ಜಂಟಿ ಚೆಕ್ ಮೆಷರ್‌ಮೆಂಟ್ ಮಾಡಿಲ್ಲ. ಮೇಲೆ ಹೇಳಿದ ಎಲ್ಲಾ ಲೋಪಗಳಿಗೆ 3 ರಿಂದ 5ನೇ ಎದುರುದಾರರು ಜವಾಬ್ದಾರರಾಗಿದ್ದಾರೆ.

9. ಶ್ರೀ.ಬೋರೇಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ – 5ನೇ ಎದುರುದಾರರು ದಿ:26/01/2020 ರಂದು ಮೃತಪಟ್ಟಿರುತ್ತಾರೆಂದು ಸದರಿಯವರ ಮರಣ ಪ್ರಮಾಣ ಪತ್ರದಲ್ಲಿ ಕಂಡು ಬಂದಿದೆ.

10. ಕಾಮಗಾರಿಯ ನಿರ್ವಹಣೆ ಮತ್ತು ಬಿಲ್ ಪಾವತಿಯಲ್ಲಿ 1 ಮತ್ತು 2ನೇ ಎದುರುದಾರರ ಪಾತ್ರ ಕಂಡು ಬಂದಿಲ್ಲ.

11. ಕಾರಣ, 1, 2 ಮತ್ತು 5ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 3 ಮತ್ತು 4ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಶ್ರೀಮತಿ.ರಾಜಮ್ಮ, ಅಧ್ಯಕ್ಷರು – 4ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

mys/2698/17

(103)



14. ಶ್ರೀ.ವಿ.ಟಿ.ಪ್ರಕಾಶ್, ಕಿರಿಯ ಅಭಿಯಂತರರು – 3ನೇ ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿದೆ.

15. ಅದಲ್ಲದೆ, ಶ್ರೀ.ವಿ.ಟಿ.ಪ್ರಕಾಶ್, ಕಿರಿಯ ಅಭಿಯಂತರರು – 3ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಸದರಿಯವರು ದಿನಾಂಕ:31/07/2019ರಂದು ನಿವೃತ್ತಿ ಹೊಂದಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು **ಕೆಸಿಎಸ್ ನಿಯಮ 214(2)ರ ಅಡಿಯಲ್ಲಿ ಅವಕಾಶವಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು** ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

16. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 3ನೇ ಎದುರುದಾರರು ದಿನಾಂಕ:31/07/2019 ರಂದು ನಿವೃತ್ತಿ ಹೊಂದಿದ್ದಾರೆ.

2-6-20

(ನ್ಯಾಯಾಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.

03/06